**ದಿನಾಂಕಃ 12-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಕೆ.ಪಿ.ಹೆಚ್. 1 ನೇ ಪ್ರತಿವಾದಿಯ ಪರ ವಕೀಲರಿಂದಃ**

ಈ ದಾವೆಯಲ್ಲಿ ನಾನು 1 ನೇ ಪ್ರತಿವಾದಿಯ ಮೋಕ್ತಿಯಾರನಾಮೆದಾರನಾಗಿದ್ದು, ಈ ದಿನ ನಾನು ನ್ಯಾಯಾಲಯದಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ ಹಾಗೂ ಅದರಲ್ಲಿರು ಸಹಿಗಳು ನನ್ನವೇ ಆಗಿರುತ್ತವೆ.

ನನ್ನ ತಾಯಿ ನನ್ನ ಹೆಸರಿಗೆ ಬರೆದುಕೊಟ್ಟ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು **ನಿಡಿ-1** ಎಂದು, ಸಿಟಿಎಸ್ ನಂ. 1581/ಎ ಗೆ ಸಂಬಂಧಿಸಿದಂತೆ ಪ್ಲೇನ ಕಾರ್ಡನ ದೃಢೀಕೃತ ನಕಲನ್ನು **ನಿಡಿ-2** ಎಂದು, ಸಿಟಿಎಸ್ ನಂ. 977 ಎ/3 ಗೆ ಸಂಬಂಧಿಸಿದಂತೆ ಪ್ರಾಪರ್ಟಿ ರಜಿಸ್ಟರ ಕಾರ್ಡನ ದೃಢೀಕೃತ ನಕಲನ್ನು **ನಿಡಿ-3** ಎಂದು, ಸಿಟಿಎಸ್ ನಂ. 977/ಎ/1 ಗೆ ಸಂಬಂಧಿಸಿದಂತೆ ರೂಲ್ಡ ಕಾರ್ಡನ ದೃಢೀಕೃತ ನಕಲನ್ನು **ನಿಡಿ-4** ಎಂದು,ಸಿಟಿಎಸ್ ನಂ. 977/ಎ/1 ಗೆ ಸಂಬಂಧಿಸಿದಂತೆ ಪ್ಲೇನ ಕಾರ್ಡನ ದೃಢೀಕೃತ ನಕಲನ್ನು **ನಿಡಿ-5** ಎಂದು, ನನ್ನ ಸೋದರ ಮಾವನಾದ ರುದ್ರಯ್ಯ ಶಿವಶಂಕ್ರಯ್ಯ ವರದಿಮಠರವರು ನನ್ನ ತಾಯಿಯ ಹೆಸರಿಗೆ ಬರೆದು ಕೊಟ್ಟ ನೊಂದಾಯಿತ ಭಕ್ಷೀಸ ಪತ್ರವನ್ನು **ನಿಡಿ-6** ಎಂದು, ಅನುಸುಯ್ಯಾದೇವಿ ಎನ್ನುವವರು ಕೊಟ್ರಮ್ಮ ಎನ್ನುವವರಿಗೆ ಬರೆದುಕೊಟ್ಟ ನೊಂದಾಯಿತ ಮೃತ್ಯು ಪತ್ರವನ್ನು ಹಾಜರುಪಡಿಸಿದ್ದು ಸದ್ರಿ ಪತ್ರವನ್ನು ತಕರಾರರಿಗೆ ಒಳಪಟ್ಟು ನಿಡಿ-7 ಎಂದು ಗುರುತಿಸಲಾಯಿತು. ಓಎಸ್ ನಂ. 137/2013 ಕ್ಕೆ

**ಡಿ.ಡಬ್ಲ್ಯೂ- 1**

ಸಂಬಂಧಿಸಿದ ಆದೇಶ ಪುಟದ ದೃಢೀಕೃತ ನಕಲನ್ನು ನಿಡಿ-8 ಎಂದು ಗುರುತಿಸಲಾಯಿತು.

ವಾದಿಯ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ -

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ. ಹಾವೇರಿ.